ದೃಷ್ಟಿಯಿಂದ ಹಾಗೂ ಹೊಂದಾಣಿಕೆ ದೃಷ್ಟಿಯಿಂದ ಇವರಿಬ್ಬರನ್ನೂ ಕೂಡಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಇ) ಡೀಸಲ್ ಬೆಲೆ ಏರಿಕೆಯಿಂದ ಯಾಂತ್ರಿಕ ಮೀನುಗಾರರಿಗೆ ತೊಂದರೆಯಾಗಿರುವ ಬಗ್ಗೆ.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಸನ್ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ಆದಂತಹ ಡೀಸಲ್ ಬೆಲೆ ಏರಿಕೆಯಿಂದಾಗಿ ವಿಶೇಷವಾಗಿ ಯಾಂತ್ರಿಕ ಮೀನುಗಾರಿಕಾ ಬಂಧುಗಳು ಸಾಕಷ್ಟು ತೊಂದರೆಯಲ್ಲಿ ಸಿಕ್ಕಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲ, ಅವರು ಬ್ಯಾಂಕಿಗೆ ಸಾಲದ ಕಂತುಗಳನ್ನು ಹಾಗೂ ಬಡ್ಡಿಯನ್ನು ಮರುಪಾವತಿ ಮಾಡುವುದೂ ಸಹ ಕಷ್ಟವಾಗುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಸಾಗರೋತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡಿ ನಮ್ಮ ದೇಶಕ್ಕೆ ವಿದೇಶಿ ವಿನಿಮಯವನ್ನು ಕೊಡುವಂತಹ ಈ ಮೀನುಗಾರಿಕೆಗೆ ಹಾಗೂ ಈ ಮೀನುಗಾರ ಬಂಧುಗಳಿಗೆ ತಾವು ಖಂಡಿತ ಸಹಾಯ ಮಾಡಬೇಕು ಎಂದು ಮೇಲಿಂದ ನಮಗೆ ಮನವಿಗಳು ಬರುತ್ತಿವೆ. ಅದಕ್ಕೆ ಪೂರಕವಾಗಿ ನಾನು ಕೇಳುತ್ತಿರುವುದು 1984ನೇ ಇಸವಿಯಲ್ಲಿ ಒಂದು ಲೀಟರ್ ಡೀಸಲ್‌ಗೆ 3 ರೂಪಾಯಿ 80 ಪೈಸೆ ಇದ್ದಂತಹ ಸಂದರ್ಭದಲ್ಲಿ ಕೊಟ್ಟಿರುವಂತಹ ಸಹಾಯಧನ ಈ ಹದಿನಾಲ್ಕು ವರ್ಷಗಳ ನಂತರವೂ ಕೂಡ ಮುಂದುವರೆಯುತ್ತಿದೆ. ಅಂದರೆ 14 ವರ್ಷಗಳ ಹಿಂದೆ ಇದ್ದಂತಹ ಸಬ್ಸಿಡಿಯನ್ನೇ ಈಗಲೂ ಮುಂದುವರೆಸಲಾಗುತ್ತಿದೆ. ಈಗ ಬಹುಶಃ ಒಂದು ಲೀಟರ್ ಡೀಸಲ್‌ಗೆ ಹೆಚ್ಚು ಕಡಿಮೆ ಸೇಲ್ಸ್ ಟ್ಯಾಕ್ಸ್ ಮತ್ತು ಇನ್ನಿತರ ತೆರಿಗೆಗಳು ಸೇರಿದರೆ 5 ರೂಪಾಯಿ 40 ಪೈಸೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ನಾನು ವಿನಂತಿ ಮಾಡುವುದೇನೆಂದರೆ ಮುಂದೆ ಬರುವಂತಹ ಬಜೆಟ್ ಅಧಿವೇಶನ ಸಮಯದಲ್ಲಿ ಡೆಲಿವರಿ ಪಾಯಿಂಟ್‌ನಲ್ಲಿ 5 ರೂಪಾಯಿ 40 ಪೈಸೆಗೆ ಸಿಗುವಂತೆ ಡೀಸೆಲ್ ಸಬ್ಸಿಡಿಯನ್ನು ಕೊಡಬೇಕು. ಮತ್ತು ಮೀನುಗಾರಿಕೆಗೆ ಪರಿಹಾರವನ್ನು ಕೊಡಬೇಕು ಎನ್ನುವಂತಹ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇದರ ಜೊತೆಗೆ ಪ್ರಿಂಟಿಂಗ್ ಎಂದು ಯಾವ ಒಂದು ಕಲೆ ಇದೆ ಅದು ಕೇವಲ ಕಾಂಟ್ರಾಕ್ಟ್ ವರ್ಕಿನ ಆಧಾರದ ಮೇಲೆ ಆಗುವಂತಹ ಕೆಲಸ. ಇದರ ಮೇಲೆ ಖಂಡಿತ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಮುದ್ರಣ ವಸ್ತುಗಳ ಮೇಲೆ ತೆರಿಗೆ ಹಾಕಬಾರದು ಎಂಬ ಮನವಿ ಕೂಡ ರಾಜ್ಯಾದ್ಯಂತ ನಮಗೆ ಬರುತ್ತಿದೆ. ಈ ಬಗ್ಗೆ ಕೂಡ ಮುಂದಿನ ಬಜೆಟ್ ಅಧಿವೇಶನ ಸಮಯದಲ್ಲಿ ವಿನಾಯಿತಿ ಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತಿದ್ದೇನೆ.

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪಾಧ್ಯಕ್ಷರೆ, ಉತ್ತರ ಕನ್ನಡ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸುಮಾರು ಆರು ಸಾವಿರಕ್ಕಿಂತಲೂ ಹೆಚ್ಚು ಯಾಂತ್ರಿಕೃತ ದೋಣಿಗಳಿವೆ. ಈಗಾಗಲೇ ಡೀಸಲ್ ಬೆಲೆ 12 ರಿಂದ 18 ಪೈಸೆ ಏರಿರುವಾಗ ಮೀನುಗಾರಿಕೆಗೆ ಹೋಗುವ ದೋಣಿಗಳು ಕನಿಷ್ಠ 45 ರಿಂದ 51 ಲೀಡಿ

ಉದ್ದದವುಗಳಾಗಿರುತ್ತವೆ. ಇವು ಮೀನುಗಾರಿಕೆಗೆ ಒಂದು ಬಾರಿ ಹೋಗಲು ಸುಮಾರು ಒಂದು ಸಾವಿರ ಲೀಟರ್ ಡೀಸಲ್ ಬೇಕಾಗುತ್ತದೆ. ಆದರೆ ಹೆಚ್ಚಿನ ಯಾಂತ್ರೀಕೃತ ದೋಣಿಗಳು ಈ ಡೀಸಲ್ ಬೆಲೆಯ ಹೆಚ್ಚಳದಿಂದಾಗಿ ಮೀನುಗಾರಿಕೆಗೆ ಹೋಗಿ ಬಂದ ನಂತರ ಯಾವುದೇ ಲಾಭಾಂಶವಿಲ್ಲದೆ ನಷ್ಟ ಅನುಭವಿಸಿ ದಡ ಸೇರುತ್ತಿವೆ. ಈ ರೀತಿ ನಷ್ಟ ಅನುಭವಿಸಿ ದಡ ಸೇರಿದಂತಹ ಯಾಂತ್ರೀಕೃತ ದೋಣಿಗಳು ರಾಷ್ಟ್ರೀಕೃತ ಬ್ಯಾಂಕುಗಳು, ಕೆ.ಎಸ್.ಎಫ್.ಸಿ. ಮೊದಲಾದ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದಿದ್ದು ಆ ಸಾಲವನ್ನು ಮರುಪಾವತಿ ಮಾಡಿಲ್ಲವೆಂದು ಅವರ ಮನೆ-ಮಠಗಳನ್ನು ಜಪ್ತಿ ಮಾಡುವ ಆದೇಶ ಹೊರಡಿಸಿವೆ. ಈ ಬಗ್ಗೆ ನನ್ನ ವಿನಂತಿ ಏನೆಂದರೆ ಮಾನ್ಯ ಯೋಗೀಶ್ ಭಟ್‌ರವರು ಹೇಳಿದಂತೆ 14 ವರ್ಷಗಳ ಹಿಂದೆ ಯಾವ ರೀತಿ 30-35 ಅಡಿ ಉದ್ದ ಯಾಂತ್ರೀಕೃತ ದೋಣಿಗಳಿಗೆ ವಾರ್ಷಿಕವಾಗಿ ಮೂರು ಸಾವಿರ ರೂಪಾಯಿಗಳಂತೆ ಡೀಸಲ್ ಸಬ್ಸಿಡಿ ಮತ್ತು 45 ರಿಂದ 51 ಅಡಿ ಉದ್ದದ ಯಾಂತ್ರೀಕೃತ ದೋಣಿಗಳಿಗೆ ವಾರ್ಷಿಕವಾಗಿ ಒಂಭತ್ತು ಸಾವಿರ ರೂಪಾಯಿಗಳಂತೆ ಡೀಸಲ್ ಸಬ್ಸಿಡಿ ಎಂದು ಕೊಡುತ್ತಿದ್ದರು, ಅದನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಮುಂದಿನ ಮುಂಗಡಪತ್ರ ತಯಾರಿಸುವಾಗ ಎರಡು ವರ್ಷಗಳ ಕಾಲಾವಧಿಗೆ ಯಾಂತ್ರೀಕೃತ ದೋಣಿಗಳಿಗೆ ಉಪಯೋಗಿಸುವ ಡೀಸೆಲ್‌ಗೆ ಸಂಪೂರ್ಣವಾಗಿ ಮಾರಾಟ ಕರವನ್ನು ರದ್ದು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಹೀಗೆ ಮಾಡಿದಲ್ಲಿ ಮಾತ್ರ ಖಂಡಿತವಾಗಿಯೂ ಯಾಂತ್ರೀಕೃತ ದೋಣಿಗಳು ಮತ್ತೆ ಬದುಕುವಂತಹ ಪರಿಸ್ಥಿತಿ ಇರುತ್ತದೆ. ಆದುದರಿಂದ ದಯಮಾಡಿ ಮೀನುಗಾರಿಕಾ ಮಂತ್ರಿಗಳು ಮತ್ತು ಮಾನ್ಯ ಆರ್ಥಿಕ ಸಚಿವರು ಈ ವಿಚಾರದಲ್ಲಿ ಮಾತುಕತೆ ನಡೆಸಿ ಮುಂದಿನ ಬಜೆಟ್‌ನಲ್ಲಿ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಉಪಯೋಗಿಸುವ ಡೀಸಲ್ ಮೇಲಿನ ಮಾರಾಟ ಕರವನ್ನು ರದ್ದುಪಡಿಸಬೇಕೆಂದು ನಾನು ಆಗ್ರಹಿಸುತ್ತೇನೆ. ಜೊತೆಗೆ ಪೆಟ್ರೋಲನ್ನು ಕೂಡ ನಿಮ್ಮದೇ ಮೀನುಗಾರಿಕಾ ಸಹಕಾರಿ ಸಂಘಗಳಲ್ಲಿರುವ ಪೆಟ್ರೋಲ್ ಬಂಕುಗಳ ಮೂಲಕ ಮಾರಾಟ ಮಾಡಿಸಿದರೆ ಅದರಲ್ಲಿ ಯಾವುದೇ ರೀತಿಯ ದುರುಪಯೋಗವಾಗುವುದಿಲ್ಲ ಎಂಬ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬಂದರು ಮತ್ತು ಮೀನುಗಾರಿಕಾ ಸಚಿವರು): ಯಾಂತ್ರೀಕೃತ ದೋಣಿಗಳು ಉಪಯೋಗಿಸುವ ಡೀಸಲ್ ಮೇಲಿನ ಸಬ್ಸಿಡಿಯನ್ನು ಹೆಚ್ಚುವರಿ ಮಾಡಬೇಕೆಂದು ಈಗಾಗಲೇ ಮೀನುಗಾರರು ಹಾಗೂ ಮಾನ್ಯ ಶಾಸಕ ಮಿತ್ರರು ಹೇಳಿದ್ದಾರೆ. ಡೀಸಲ್ ಮೇಲಿನ ಸಬ್ಸಿಡಿಯನ್ನು ಜಾಸ್ತಿ ಮಾಡಬೇಕೆಂದು ಸೂಚಿಸಿ ನಾನು ಸರ್ಕಾರಕ್ಕೆ ಈಗಾಗಲೇ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಏಕೆಂದರೆ ಡೀಸಲ್ ಬೆಲೆ 3.50 ರೂಪಾಯಿ ಇದ್ದಾಗ ಈ 52 ಪೈಸೆ ಸಬ್ಸಿಡಿಯನ್ನು ಕೊಡಲು ಪ್ರಾರಂಭಿಸಿದೆವು. ಈಗ ಡೀಸಲ್ ಬೆಲೆ 12.39 ರೂಪಾಯಿ ಆಗಿದೆ. ಆದುದರಿಂದ ವಾರ್ಷಿಕ ಗರಿಷ್ಠ 9 ಸಾವಿರ ಇದ್ದಂತಹ ಡೀಸಲ್ ಸಬ್ಸಿಡಿಯನ್ನು ಈಗ 15

ಸಾವಿರ ರೂಪಾಯಿಗಳಿಗೆ ಹೆಚ್ಚಿಸ ಬೇಕೆಂಬ ಒಂದು ತೀರ್ಮಾನವನ್ನು ಮಾಡಿದ್ದೇವೆ. ಅದನ್ನು ವರ್ಕ್‌ಔಟ್ ಕೂಡ ಮಾಡುತ್ತಿದ್ದೇವೆ. ಇದರ ಬಗ್ಗೆ ವಿಸ್ತಾರವಾದ ಹೇಳಿಕೆಯನ್ನು ಕೊಡಲು ತಾವು ಅವಕಾಶ ಮಾಡಿಕೊಡಬೇಕು. ಪ್ರಾಯಶಃ ನಾಳೆ ಅಲ್ಲದಿದ್ದರೆ ಸೋಮವಾರದ ದಿನ ಈ ಬಗ್ಗೆ ಹೇಳಿಕೆ ಕೊಡುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್: ಇದಕ್ಕೆ ಪರಿಹಾರವೇನೂ ಇಲ್ಲವೇ? ಮಾರಾಟ ತೆರಿಗೆಯಲ್ಲಿ ವಿನಾಯಿತಿ ಕೊಡುವುದು ಸಾಧ್ಯವಿಲ್ಲವೇ?

ಉಪಾಧ್ಯಕ್ಷರು: ನಾಳೆ ಈ ಬಗ್ಗೆ ಸ್ಪಷ್ಟವಾಗಿ ಹೇಳಿಕೆ ಕೊಡುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಮತ್ತೆ ಏತಕ್ಕೆ ಚರ್ಚೆ ಮಾಡುತ್ತೀರಿ?

(ಈ) ಪಂಚಾಯತಿಗಳಿಗೆ ಅಧ್ಯಕ್ಷ ಅಥವಾ ಆಡಳಿತಾಧಿಕಾರಿಗಳ ನೇಮಕ

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ಪಂಚಾಯತಿಗಳಲ್ಲಿದ್ದಂತಹ ಕೆಲವು ಹಳ್ಳಿಗಳನ್ನು ಮುನಿಸಿಪಾಲಿಟಿಗಳಿಗೆ ಸೇರಿಸಿದ ಮೇಲೆ ಪಂಚಾಯತಿಗಳಲ್ಲಿ ಖಾಲಿ ಬಿದ್ದ ಸ್ಥಾನಗಳಿಗೆ ಸರ್ಕಾರ ನಾಮಕರಣ ಸದಸ್ಯರನ್ನು ಭರ್ತಿ ಮಾಡಿದರು. ಆದರೆ ಆ ಪಂಚಾಯಿತಿಗಳಿಗೆ ಈವರೆಗೆ ಅಧ್ಯಕ್ಷರನ್ನಾಗಲಿ ಅಥವಾ ಆಡಳಿತಾಧಿಕಾರಿಗಳನ್ನಾಗಲಿ ನೇಮಕ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಯನ್ನು ಕೇಳಿದರೆ ''ನಾನು ಅಸಹಾಯಕ, ಕಾನೂನುಬದ್ಧವಾಗಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಸಾಧ್ಯವಿಲ್ಲ'' ಎಂದು ಹೇಳುತ್ತಾರೆ. ಇದರಲ್ಲಿ ಎರಡು ಮೂರು ಪಂಚಾಯಿತಿಗಳು ಇವತ್ತು ಕೆಲಸ ಮಾಡದಂತಹ ಸ್ಥಿತಿಯನ್ನು ತಲುಪಿವೆ. ಆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ನಾಳೆ ನಾಡಿದ್ದರಲ್ಲಿ ಇದಕ್ಕೆ ಒಂದು ಪರಿಹಾರವನ್ನು ಸೂಚಿಸಬೇಕು. ತಾವು ಏನಾದರೂ ಮಾಡಿ ನಾಳೆ ನಾಡಿದ್ದರಲ್ಲಿ ಇದಕ್ಕೆ ಒಂದು ವ್ಯವಸ್ಥೆ ಮಾಡಿದರೆ ಕನಿಷ್ಠ ಮಾರ್ಚ್ 30ನೇ ತಾರೀಖಿನೊಳಗಾದರೂ ಅವರಿಗೆ ಇರತಕ್ಕಂಥ ಅನುದಾನವನ್ನು ಖರ್ಚು ಮಾಡಿ ಅಲ್ಲಿ ಆಗಬೇಕಾಗಿರುವ ಕೆಲಸವನ್ನು ಮಾಡುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ ಎಂಬುದಾಗಿ ನಾನು ಅವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಇದರಲ್ಲಿ ಪಾರ್ಷಿಕವಾಗಿ ಸತ್ಯ ಇದೆ. ದುಗುಡ ಹಳ್ಳಿ, ಜೋಗಿ ಹಳ್ಳಿ ಗ್ರಾಮ ಪಂಚಾಯತಿಗಳಲ್ಲಿ ಚುನಾಯಿತ ಅಧ್ಯಕ್ಷರು ಇಲ್ಲದೇ ಇರುವುದರಿಂದ ತೊಂದರೆಯಾಗಿದೆ. ಈ ವಿಚಾರ ಹೈಕೋರ್ಟಿನಲ್ಲಿ ಇರುವುದರಿಂದ ಈ ಎರಡೂ ಗ್ರಾಮ ಪಂಚಾಯತಿಗಳಿಗೆ ಒಬ್ಬ ಕಾರ್ಯದರ್ಶಿಯನ್ನು ನೇಮಕಾತಿ ಮಾಡಿದ್ದೇವೆ. ಅವರು ದೈನಂದಿನ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಆಡಳಿತಾಧಿಕಾರಿಯನ್ನು ನೇಮಕ ಮಾಡುವಂತಹ ಅಧಿಕಾರ